O.S.114/2019
DW-1

**ಸಾಕ್ಷಿಯನ್ನು ದಿನಾಂಕ 03-03-2026 ರಂದು ಕರೆಸಿ ಸತ್ಯ ಪ್ರಮಾಣ ಮಾಡಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ GK ವಕೀಲರಿಂದಃ**

ನಾನು **2024-25** ರಲ್ಲಿ ರಾಗಿ ಬೆಳೆಯ ವಿಮೆಗಾಗಿ ಹಣವನ್ನು ಕಟ್ಟಿರುತ್ತೇನೆ. ದಾವಾ ಆಸ್ತಿಗೆ ಸಂಬಂಧಪಟ್ಟ **2024-25** ಮತ್ತು **2025-26** ನೇ ಸಾಲಿನ ಪಹಣಿಪತ್ರಿಕೆಗಳನ್ನು ನಾನು ನೋಡಿರುವುದಿಲ್ಲ. **2024-25** ಮತ್ತು **2025-26** ನೇ ಸಾಲಿನ ರಾಗಿಯ ಬೆಳೆಯ ವಿಮೆ ನಾನು ಪಡೆದಿರುವುದಿಲ್ಲ. ನಾನು ವಾದಿಗೆ ಕರಾರುಪತ್ರ ಬರೆದುಕೊಟ್ಟ ನಂತರ ದಾವಾ ಆಸ್ತಿಯಲ್ಲಿ ಸ್ವಾಧೀನದಲ್ಲಿರುವುದಿಲ್ಲ ಹಾಗೂ ಯಾವುದೇ ಬೆಳೆಯನ್ನು ಬೆಳೆದಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನಾನು ಸ್ವಾಧೀನದಲ್ಲಿ ಇದ್ದೇನೆಂದು ತೋರಿಸುವ ಸಲುವಾಗಿ ನಾನು ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆಂದರೆ ಸರಿಯಲ್ಲ. ನಿಪಿ-**13** ರಿಂದ **18** ರಲ್ಲಿ ಕಾಣುತ್ತಿರುವ ಟ್ರ್ಯಾಕ್ಟರನ್ನು ಚಾಲನೆ ಮಾಡುತ್ತಿರುವ ವ್ಯಕ್ತಿ ನನ್ನ ತಮ್ಮ ಸಿದ್ದರಾಜುರವರಾಗಿರುತ್ತಾರೆ. ಸದರಿ ಸಿದ್ದರಾಜುರವರನ್ನು ಈ ದಾವೆಯಲ್ಲಿ ನನ್ನ ಪರವಾಗಿ ವಿಚಾರಣೆ ಮಾಡಲು ನನ್ನದೇನು ಅಭ್ಯತಂರ ಇರುವುದಿಲ್ಲ. ನಿಪಿ-**13** ರಿಂದ **18** ನ್ನು ನಾನೇ ತೆಗೆದು ಫೋಟೋ ಸ್ಟುಡಿಯೋದಲ್ಲಿ ಪ್ರಿಂಟ್ ತೆಗೆಸಿರುತ್ತೇನೆ. ಫೋಟೋ ಸ್ಟುಡಿಯೋದವರು ನಿಪಿ-**21** ನ್ನು ನೀಡಿರುತ್ತಾರೆ. ನಿಪಿ-**21** ನ್ನು ನೀಡಿರುವ ಫೋಟೋ ಸ್ಟುಡಿಯೋದವರನ್ನು ಸಾಕ್ಷಿಯಾಗಿ ವಿಚಾರಣೆ ಮಾಡಲು ಆಗುವುದಿಲ್ಲ. ದಿಃ **12.06.1990** ರಿಂದ ನಾನು ದಾವಾ ಆಸ್ತಿಯಲ್ಲಿ ಸ್ವಾಧೀನದಲ್ಲಿ ಇಲ್ಲದೇ ಇದ್ದರೂ ದಾವಾ ಆಸ್ತಿಯ ಬೆಲೆ ಈಗ ಹೆಚ್ಚಾಗಿರುವ ಕಾರಣ ನಾನು ಸುಳ್ಳು ದಾಖಲೆ ಸೃಷ್ಟಿ ಮಾಡಿಕೊಂಡು ಬಂದು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ದಾವಾ ಆಸ್ತಿಯ ಬಳಿ ನಾವು ಹೋಗುವುದಿಲ್ಲ ಹಾಗೂ ದಾವಾ ಆಸ್ತಿಯಲ್ಲಿ ವಾದಿಯ ಸ್ವಾಧೀನಕ್ಕೆ ನಾವು ತೊಂದರೆ ಪಡಿಸುವುದಿಲ್ಲ ಎಂದು ಪೊಲೀಸ್ ಠಾಣೆಯಲ್ಲಿ ಮುಚ್ಚಳಿಕೆಯನ್ನು ಬರೆದುಕೊಟ್ಟಿರುತ್ತೇನೆಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

**ಓದಿ ಹೇಳಿ ಕೇಳಿ ಸರಿ ಇರುತ್ತದೆ.**

**ಸಿ.ಜೆ. ಮತ್ತು ಪ್ರ.ದ.ನ್ಯಾದಂ.**
**ಕೊರಟಗೆರೆ**

O.S.114/2019
DW-1

Plaintiff present, filed his affidavit in lieu of chief examination and examined as PW-1 got marked Ex.P. 1 to 12.

Sri. DCS prays time.

Further chief of PW 1 by: 10-09-2025

Civil Judge and JMFC.
*Koratagere.*